

## ಇಂಥ ಅಭ್ಯರ್ಥಿ ಬೇಕು

ಕಮಾಂಡರ್: ನಮಗೆ ಸಂದೇಹಿಸುವ, ಚುರುಕಾಗಿರುವ, ಸದಾ ಜಾಗ್ರತ ಕಿವಿ, ಮೂಗು, ಕಣ್ಣು ಇರುವ, ನಿರ್ದಯಿಯಾದ ಮತ್ತು ಸದಾ ಹುಡುಕುವ ಅಭ್ಯಾಸ ಇರುವ ಅಭ್ಯರ್ಥಿ ಬೇಕಾಗಿದ್ದಾರೆ.

ಅಭ್ಯರ್ಥಿ: ಹಾಗಿದ್ದರೆ ನನ್ನ ಹೆಂಡತಿಯನ್ನು ನೇಮಕ ಮಾಡಿಕೊಳ್ಳಿ.

***

## ಸುಳ್ಳು ಹೇಳಬಾರದೇಕೆ?

ಸ್ವಾಮೀಜಿ: ಮಹಿಳೆಯರ ಹತ್ತಿರ ಏಕೆ ಸುಳ್ಳು ಹೇಳಬಾರದು?

ಶಿಷ್ಯ: ಅವರು ಪೊಲೀಸ್, ಸಿಬಿಐ, ಎಸಿಬಿ, ಲೋಕಾಯುಕ್ತ, ಅಷ್ಟೇ ಯಾಕೆ ಎಫ್.ಬಿ.ಐಯವರೂ ನಾಚಿಕೆ ಪಡುವಂತೆ ಇನ್ವೆಸ್ಟಿಗೇಷನ್ ಮಾಡಿ ಸತ್ಯವನ್ನು ಹೊರಹಾಕುತ್ತಾರೆ.

***

## ಗುಂಡಿಗಳ ಲಾಭವೇನು?



ರಂಗ: ರಸ್ತೆ ಗುಂಡಿಗಳಿಂದ ಆಗುವ ಲಾಭವೇನು?

ಮಂಗ: ಆರ್ಥೋಪಿಡಿಕ್ ಡಾಕ್ಟರ್‌ಗಳಿಗೆ ಧಾರಾಳ ಪೇಷಂಟ್ಸ್ ಸಿಗುತ್ತಾರೆ. ಗ್ಯಾರೇಜುಗಳಿಗೆ ಕೈ ತುಂಬಾ ಕೆಲಸ ಸಿಗುತ್ತದೆ. ತುಂಡು ಗುತ್ತಿಗೆದಾರರಿಗೆ ಭರಪೂರ ಟೆಂಡರ್‌ಗಳೂ ಲಭ್ಯವಾಗುತ್ತವೆ.

***

## ಬೆಡ್‌ರೂಮ್ ಪರಿಮಳ ಹೇಗಿರುತ್ತದೆ?

ಮದುವೆಯ ಮೊದಲ ಮೂರು ವರ್ಷ: ಚಾಕೊಲೇಟ್, ಹೂವು ಮತ್ತು ಪರ್ಫ್ಯೂಮ್ ಪರಿಮಳ.

ಮೂರು ವರ್ಷದ ನಂತರ: ಜಾನ್ಸನ್ ಬೇಬಿ ಪೌಡರ್, ಜಾನ್ಸನ್ ಕ್ರೀಮ್, ಲೋಷನ್ ಸುವಾಸನೆ.

ಹದಿನೈದು ವರ್ಷದ ನಂತರ: ವಿಕ್ಸ್, ಟೈಗರ್ ಬಾಮ್, ಮೂವ್, ಅಯೋಡೆಕ್ಸ್ ವಾಸನೆ.

ನಲವತ್ತು ವರ್ಷದ ನಂತರ: ಆಧ್ಯಾತ್ಮ ಕುರಿತ ಪುಸ್ತಕಗಳು ಮತ್ತು ಊದಿನ ಕಡ್ಡಿಗಳ ವಾಸನೆ.

***

## ವ್ಯತ್ಯಾಸ ಏನು

ಶಿಕ್ಷಕ: ಕ್ಯಾಲೆಂಡರ್ ಹೊಸ ವರ್ಷಕ್ಕೂ, ಹಿಂದೂಗಳ ಹೊಸ ವರ್ಷಕ್ಕೂ ಏನು ವ್ಯತ್ಯಾಸ?

ಗುಂಡ: ಬಾರ್–ಪಬ್‌ಗಳು ತುಂಬಿದ್ದು, ದೇವಾಲಯಗಳು ಬಿಕೋ ಎನ್ನುತ್ತಿದ್ದರೆ ಕ್ಯಾಲೆಂಡರ್ ಹೊಸ ವರ್ಷ. ದೇವಾಲಯಗಳು ತುಂಬಿದ್ದು, ಬಾರ್–ಪಬ್‌ಗಳು ಖಾಲಿ ಹೊಡೆದರೆ ಹಿಂದೂ ಹೊಸ ವರ್ಷ.

***

## ವ್ಯಾಲೆಂಟೈನ್, ಕ್ವಾರಂಟೈನ್

ಅಪ್ಪ: ವ್ಯಾಲೆಂಟೈನ್ ಮತ್ತು ಕ್ವಾರಂಟೈನ್‌ಗೆ ಇರುವ ವ್ಯತ್ಯಾಸ ಏನು?

ಮಗ: ವ್ಯಾಲೆಂಟೈನ್ ವೇಳೆ ಅಪ್ಪಿಕೊಂಡರೆ, ಕ್ವಾರಂಟೈನ್‌ನಲ್ಲಿ ದೂರ ಇರುತ್ತಾರೆ!

***

## ಸಂಬಂಧಗಳು ಮತ್ತು ಊಟ

ಮಣ್ಣಿನ ಪಾತ್ರೆಯಲ್ಲಿ ಊಟ ಮಾಡುವಾಗ ತಾಳ್ಮೆ ಇತ್ತು.

ಬಾಳೆ ಎಲೆಯಲ್ಲಿ ಉಣ್ಣುವಾಗ ಹಸಿರಾಗಿತ್ತು.

ಲೋಹದ ಪಾತ್ರೆಯಲ್ಲಿ ಊಟ ಮಾಡುವಾಗ ಬಿರುಸಾಗಿತ್ತು.

ಗಾಜಿನಪಾತ್ರೆ ಬಂದ ಮೇಲೆ ಮಾತು – ಮಾತು ಮಾತಿಗೆ ಜಗಳ

ಕಾಗದದ ಪಾತ್ರೆ ಬಂದ ಮೇಲೆ ಯೂಸ್ ಎಂಡ್ ಥ್ರೋ.

–(ಸಂಗ್ರಹ) ರಮಾನಂದ ಶರ್ಮಾ, ಬೆಂಗಳೂರು

## ಬೆಳದಿಂಗಳ ಊಟ

ಆಮನಿ: ಏ ಪಮ್ಮಿ, ಈಗ ಎರಡು ವಾರಗಳ ಹಿಂದೆ ನೀನು ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿದ ನಿನ್ನ ಫ್ಯಾಮಿಲಿ ಜೊತೆ ಹುಣ್ಣಿಮೆ ಬೆಳದಿಂಗಳ ಊಟದ ವಿಡಿಯೊ ಬಹಳ ಚೆನ್ನಾಗಿತ್ತು.

ಪಮ್ಮಿ: ಹೌದೇ. ಥ್ಯಾಂಕ್ ಯು.

ಆಮನಿ: ನಾನೂ ಮೊನ್ನೆ ಒಂದು ವಿಡಿಯೊ ಹಾಕಿದ್ದೆ. ನೋಡಲಿಲ್ವ?

ಪಮ್ಮಿ: ಇಲ್ಲ. ಯಾವಾಗ ಹಾಕಿದ್ದು?

ಆಮನಿ: ಸರಿಯಾಗಿ ನೀನು ಹಾಕಿದ ಎರಡು ವಾರಕ್ಕೆ.

ಪಮ್ಮಿ: ಮತ್ತೆ ನನಗೆ ತಿಳಿಯಲಿಲ್ಲ. ಕಾಣಲಿಲ್ಲ.

ಆಮನಿ: ಹೇಗೆ ಕಾಣಲು ಸಾಧ್ಯ? ಆ ದಿನ ಅಮಾವಾಸ್ಯೆ!

## ಫೋನ್ ಪೇ ಮಾಡಿ!

ಭಿಕ್ಷುಕ: ಅಮ್ಮಾ, ತಾಯಿ.

ಅಮ್ಮ: ತೊಗೋ. ಪಾತ್ರೆ ಹಿಡಿದುಕೋ.

ಭಿಕ್ಷುಕ: ಇರಲಿ ಬಿಡಿ ಅಮ್ಮಾವ್ರೇ, ಭಿಕ್ಷೆ ಬೇಡ ಬಿಡಿ.

ಅಮ್ಮ: ಯಾಕಪ್ಪಾ ಏನಾಯ್ತು?

ಭಿಕ್ಷುಕ: ಈಗ ಕೊರೊನಾಡ ರೋಗ ಹರಡದಂತೆ ಇರಬೇಕು ಅಂತ ಎಲ್ಲರೂ ಅಂತಾರೆ ಅಲ್ಲವರಾ?

ಅಮ್ಮ: ಹೌದು.

ಭಿಕ್ಷುಕ: ಮತ್ತೆ ನೀವು ಮುಖಗವುಸು, ಕೈ ಗವುಸು ಆಕೆ ಇಲ್ವಲ್ಲಾ? ನಾವು ಉಸಾರಾಗಿರ್ ಬೇಕು ಅಲ್ವಾ. ಅದಕ್ಕೆ ನೂರು ರೂಪಾಯಿ ಹಣ ಫೋನ್ ಪೇ ಮಾಡಿ!

–(ಸಂಗ್ರಹ) ಸುಮನಾ


